**ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಸಿ.ಸಿ. ನಂಃ 6236/2023**

**ಉಪಸ್ಥಿತರುಃ- ಶ್ರೀ ರಾಹುಲ ಚಂಭಾರ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು ಯಾದಗಿರಿ,**

**ಫಿರ್ಯಾಧಿದಾರರುಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪುರ ಪೋಲಿಸ ಠಾಣೆ**

**// ವಿರುದ್ದ //**

**ಆರೋಪಿ : ಬಸವರಾಜ**

## ಆಪಾದನೆ

ನಾನು **ಶ್ರೀ ರಾಹುಲ ಚಾಂಭಾರ, ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ. ಆರೋಪಿಯಾದ**

| | |
|---|---|
| **ಆರೋಪಿ 1.** | ಬಸವರಾಜ ತಂದೆ ಭೀಮರೆಡ್ಡಿ ಜಕ್ಕಲದಿನ್ನಿ, ವಃ 31 ವರ್ಷ,<br>ಉಃ ಒಕ್ಕಲುತನ, ಸಾಃ ಶೆಟ್ಟಿಹಳ್ಳಿ ಗ್ರಾಮ,<br>ತಾಃ ಮತ್ತು ಜಿಃ ಯಾದಗಿರಿ |

**ಆದ ನಿನ್ನ ವಿರುದ್ಧ ದೋಷಿಸುವ ಆಪಾದನೆ ಏನೆಂದರೆ,**

ಮೊದಲನೆಯದಾಗಿ ದಿನಾಂಕಃ 03-10-2023 ರಂದು ಬೆಳ್ಳಿಗೆ 09-40 ಗಂಟೆಯ ಸುಮಾರಿಗೆ ಸೈದಾಪೂರ ಪೋಲಿಸ ಠಾಣೆಯ ಹದ್ದಿಯಲ್ಲಿ ಬರುವ ಬೀದರ ಗುತ್ತಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-150 ರ ಕಡೆಚೂರು ಗ್ರಾಮದ ಸೀಮಾಂತರದ ಕೆ.ಐ.ಎ.ಡಿ.ಬಿ ಕ್ರಾಸ ಹತ್ತಿರ ಮೇಲೆ ಆರೋಪಿಯಾದ ನೀನು ತನ್ನ ಟ್ರಾಕ್ಟರ್ ಇಂಜನ್ ವಾಹನ ಸಂಖ್ಯೆಃ ಕೆಎ-33-ಟಿಎ-7542 ನೇದ್ದನ್ನು ಅತಿವೇಗ ಮತ್ತು ಅಲಕ್ಷ್ಯತನದಿಂದ ನಡೆಸಿ ವಾಹನ ನಿಯಂತ್ರಿಸದೆ ತನ್ನ ಮುಂದೆ ಹೋಗುತ್ತಿದ್ದ ಮೋಟಾರ್ ಸೈಕಲ ನಂ. ಕೆಎ-33 ವಿ-3662 ನೇದ್ದನ್ನು ಅಪಘಾತ ಮಾಡಿದ್ದು, ಈ ಮೂಲಕ ಆರೋಪಿತಯಾದ ನೀನು ಭಾ.ದಂ.ಸಂ. ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿದ್ದೀರೆಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

2. ಎರಡನೆಯದಾಗಿ ಈ ಮೇಲೆ ಹೇಳಿದ ದಿನಾಂಕ, ಸಮಯ, ಸಂದರ್ಭದಂದು ಆರೋಪಿಯಾದ ನೀನು ಟ್ರಾಕ್ಟರ ವಾಹನವನ್ನು ಅತಿವೇಗ ಮತ್ತು ಅಲಕ್ಷ್ಯತನದಿಂದ ನಡೆಸಿ ಅಪಘಾತ ಪಡಿಸಿ ಮೋಟಾರ್ ಸೈಕಲ್ ಸವಾರ ಗಂಭೀರವಾಗಿ ಗಾಯಗೊಂಡಿದ್ದು ಅವರ ಸಂಬಂಧಿಕರು ಉಪಚಾರಕ್ಕೆ ಅಂತಾ ರಾಯಚೂರು ರಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದಾಗ 2 ನೇ ಆರೋಪಿತನು ಮೃತಪಟ್ಟಿದ್ದು, ಈ ಮೂಲಕ ಆರೋಪಿತಯಾದ ನೀನು ಭಾ.ದಂ.ಸಂ. ಕಲಂ 304(ಎ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿದ್ದೀರೆಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

**3.** ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಟ್ರಾಕ್ಟರ ವಾಹನವನ್ನು ಅತಿವೇಗ ಮತ್ತು ಅಲಕ್ಷ್ಯತನದಿಂದ ನಡೆಸಿಕೊಂಡು ಅಪಘಾತವಾದ ನಂತರ ಮೋಟಾರ್ ಸಕೈಲ್ ಸವಾರ ಕ್ಷತಿಗೀಡಾದ ವ್ಯಕ್ತಿಯ ಯೋಗಕ್ಷೇಮವನ್ನು ವಿಚಾರಿಸದೆ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿದ್ದು, ಈ ಮೂಲಕ ಆರೋಪಿಯಾದ ನೀನು ಮೋ.ವಾ ಕಾಯ್ದೆ.187 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯವ ಭಾಷಯಲ್ಲಿ ಓದಿ ಹೇಳಲಾಯಿತು)

ದಿನಾಂಕಃ04.12.2024
ಸ್ಥಳ ಃಯಾದಗಿರಿ.

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ಯಾದಗಿರಿ.**